# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು – 572 103.

**ದಿನಾಂಕ: 10.03.2023 ರಂದು ಬೆಳಿಗ್ಗೆ 11:00 ಗಂಟೆಗೆ ತುಮಕೂರು ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಯವರ ಕೊಠಡಿಯಲ್ಲಿ ನಡೆದ 2022–23ನೇ ಸಾಲಿನ ದ್ವಿತೀಯ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಗಳು**

**ಹಾಜರಾದ ಸದಸ್ಯರುಗಳು**

| | | |
|---|---|---|
| 1. | ಪ್ರೊ. ವೆಂಕಟೇಶ್ವರಲು ಎಂ, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. | ಡಾ. ಕೇಶವ, ಹಿರಿಯ ಡೀನರು,<br>ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | ಸದಸ್ಯರು |
| 3. | ಡಾ. ಕೆ ರಾಜೀವಲೋಚನ<br>ನಿವೃತ್ತ ತತ್ವಶಾಸ್ತ್ರ ಉಪನ್ಯಾಸಕರು, ಕೌಸ್ತುಭ 179, ದಾರುಕ ಬಡಾವಣೆ, ಜೋಗಿಮಟ್ಟಿ ರಸ್ತೆ, ಚಿತ್ರದುರ್ಗ–577501. | ಸದಸ್ಯರು |
| 4. | ಶ್ರೀ ಕೆ.ಆರ್ ದೇವರಾಜ್<br>S/o ರಾಮಾಂಜಿನಪ್ಪ, ಮನೆ ಸಂಖ್ಯೆ: 202, ಹಳೆ ಅಂಚೆ ಕಚೇರಿ ರಸ್ತೆ, ಸೂಲಿಬೆಲೆ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 129 | ಸದಸ್ಯರು |
| 5. | ಡಾ. ಹೆಚ್.ಪಿ. ವೀರಭದ್ರಸ್ವಾಮಿ<br>ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಬಿ.ಹೆಚ್.ರಸ್ತೆ, ತುಮಕೂರು–572101. | ಸದಸ್ಯರು |
| 6. | ಡಾ. ರಂಗಪ್ಪ ಎಸ್.ಟಿ.<br>ಪ್ರಾಂಶುಪಾಲರು, ಸರ್ಕಾರಿ ಕಲಾ ವಿಜ್ಞಾನ ಮತ್ತು ವಾಣಿಜ್ಯ ಪ್ರಥಮ ದರ್ಜೆ ಕಾಲೇಜು, ಶಿರಾ ತುಮಕೂರು ಜಿಲ್ಲೆ–572137. | ಸದಸ್ಯರು |
| 7. | ಶ್ರೀಮತಿ ವಸಂತ ಟಿ.ಡಿ.<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಬಿ.ಹೆಚ್. ರಸ್ತೆ, ತುಮಕೂರು ಜಿಲ್ಲೆ–572101. | ಸದಸ್ಯರು |
| 8. | ಡಾ. ಪಾಟೀಲ್ ಮಲ್ಲಿಕಾರ್ಜುನ ಬಿ.<br>ಪ್ರಾಧ್ಯಾಪಕರು, ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತು.ವಿ.ತು | ಸದಸ್ಯರು |
| 9. | ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 10. | ಹಣಕಾಸು ಅಧಿಕಾರಿಗಳು | ವಿಶೇಷ ಆಹ್ವಾನಿತರು |
| 11. | ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಹಾಜರಾಗದ ಸದಸ್ಯರು**

| | | |
|---|---|---|
| 1. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ರವರು ಅಥವಾ<br>ಇವರ ಪ್ರತಿನಿಧಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 3. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |

| | | |
|---|---|---|
| 5. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 6. | ಡಾ. ಭಾನುಪ್ರಕಾಶ್ ಕೆ.ಎ.<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬುಕ್ಕಾಪಟ್ಟಣ, ಶಿರಾ ತಾಲ್ಲೂಕು, ತುಮಕೂರು ಜಿಲ್ಲೆ-572115. | ಸದಸ್ಯರು |

<u>ಪ್ರಸ್ತಾವನೆ:</u>

ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳು ದಿನಾಂಕ: 10.03.2023 ಶುಕ್ರವಾರ ಬೆಳಿಗ್ಗೆ: 11:00 ಗಂಟೆಗೆ ಮಾನ್ಯ ಕುಲಪತಿಯವರ ಕೊಠಡಿಯಲ್ಲಿ ನಡೆದ 2022-23ನೇ ಸಾಲಿನ ದ್ವಿತೀಯ ಸಾಮಾನ್ಯ ಸಿಂಡಿಕೇಟ್ ಸಭೆಗೆ ಹಾಜರಾದ ಎಲ್ಲಾ ಸದಸ್ಯರುಗಳನ್ನು ಆತ್ಮೀಯವಾಗಿ ಸ್ವಾಗತಿಸಿದರು, ಹಾಗೂ ನೂತನವಾಗಿ ತುಮಕೂರು ವಿಶ್ವವಿದ್ಯಾನಿಲಯಕ್ಕೆ ಆಗಮಿಸಿರುವ ಶ್ರೀಮತಿ ನಹೀದ ಜಮ್ ಜಮ್ (ಕೆ.ಎ.ಎಸ್), ಕುಲಸಚಿವರು (ಆಡಳಿತ) ಇವರನ್ನು ಸಿಂಡಿಕೇಟ್ ಸಭೆಗೆ ಆತ್ಮೀಯವಾಗಿ ಸ್ವಾಗತಿಸಿದರು, ತದನಂತರ ಸಭೆಯಲ್ಲಿ ಈ ಕೆಳಕಂಡ ಕಾರ್ಯಸೂಚಿಯ ಬಗ್ಗೆ ಚರ್ಚಿಸಿ ನಿರ್ಣಯವನ್ನು ಕೈಗೊಳ್ಳಲಾಯಿತು.

| ಕ್ರ ಸಂ | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ನಿರ್ಣಯಗಳು |
|---|---|---|---|
| **ದಿನಾಂಕ:20.01.2023 ರಂದು ನಡೆದ ಪ್ರಥಮ ಸಾಮಾನ್ಯ ಸಿಂಡಿಕೇಟ್ ಸಭಾ ನಡಾವಳಿಗಳ ದೃಢೀಕರಣ ಮತ್ತು ದಿನಾಂಕ 14.02.2023 ರಂದು ನಡೆದ ಪ್ರಥಮ ವಿಶೇಷ ಸಿಂಡಿಕೇಟ್ ಸಭಾ ನಡಾವಳಿಗಳ ದೃಢೀಕರಣ** | | | |
| **ಪರೀಕ್ಷಾ ವಿಭಾಗ** | | | |
| 1. | 2022-23:ಸಾ.ಸಿಂ.02: ಪರೀಕ್ಷಾ ವಿಭಾಗ-01 | 2022-23ರ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕೋತ್ತರ ಹಾಗೂ ಪಿಹೆಚ್.ಡಿ. ಪ್ರವೇಶ ಪರೀಕ್ಷೆಗಳ ಪೂರ್ವ ಸಿದ್ಧತೆಗಾಗಿ ಪರೀಕ್ಷಾ ಮಂಡಳಿಗಳನ್ನು ರಚಿಸಿ ಪರೀಕ್ಷಾ ಕಾರ್ಯಗಳನ್ನು ಕೈಗೊಂಡಿರುವ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು 2022-23ರ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕೋತ್ತರ ಹಾಗೂ ಪಿಹೆಚ್.ಡಿ. ಪ್ರವೇಶ ಪರೀಕ್ಷೆಗಳ ಪೂರ್ವ ಸಿದ್ಧತೆಗಾಗಿ ಪರೀಕ್ಷಾ ಮಂಡಳಿಗಳನ್ನು ರಚಿಸಿ ಪರೀಕ್ಷಾ ಕಾರ್ಯಗಳನ್ನು ಕೈಗೊಳ್ಳಲು ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ ಸ್ಥಿರೀಕರಿಸಿತು. |
| 2. | 2022-23:ಸಾ.ಸಿಂ.01: ಪರೀಕ್ಷಾ ವಿಭಾಗ-02 | ವಿಶ್ವವಿದ್ಯಾನಿಲಯದ ಸ್ನಾತಕ ಶಿಕ್ಷಣ ಪದವಿಯ ಪ್ರಶ್ನೆ ಪತ್ರಿಗಳ ಹಸ್ತ ಪ್ರತಿಗಳ ಕರಡು ಪ್ರತಿಗಳು ಸಾಮಾಜಿಕ ಜಾಲತಾಣದಲ್ಲಿ ಬಹಿರಂಗಗೊಂಡಿರುವ ಹಿನ್ನಲೆಯಲ್ಲಿ ಪರೀಕ್ಷಾ ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರ ಎಲ್ಲಾ ಪರೀಕ್ಷಾ ಕಾರ್ಯಗಳ ಸೇವೆಯನ್ನು ರದ್ದುಗೊಳಿಸಿ, ನಿರ್ಬಂಧಿಸಿರುವ ಕುರಿತು. | ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು ವಿಶ್ವವಿದ್ಯಾನಿಲಯದ ಸ್ನಾತಕ ಶಿಕ್ಷಣ ಪದವಿಯ ಪ್ರಶ್ನೆ ಪತ್ರಿಕೆಗಳ ಹಸ್ತ ಪ್ರತಿಗಳ ಕರಡು ಪ್ರತಿಗಳು ಸಾಮಾಜಿಕ ಜಾಲತಾಣದಲ್ಲಿ ಬಹಿರಂಗಗೊಂಡಿರುವ ಹಿನ್ನಲೆಯಲ್ಲಿ ವಿಶ್ವವಿದ್ಯಾನಿಲಯವು ಸದರಿ ಪರೀಕ್ಷಾ ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರ ಎಲ್ಲಾ ಪರೀಕ್ಷಾ ಕಾರ್ಯಗಳ ಸೇವೆಯನ್ನು ರದ್ದುಗೊಳಿಸಿ, ನಿರ್ಬಂಧಿಸಲು ಕೈಗೊಂಡಿದ್ದ ಕ್ರಮವನ್ನು ಕೂಲಂಕಷವಾಗಿ ಚರ್ಚಿಸಿ, ಈ ಕೆಳಕಂಡಂತೆ ನಿರ್ಣಯಿಸಿರುತ್ತದೆ.<br>ಸದರಿ ಅಧ್ಯಯನ ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ಮುಂಬರುವ ಸ್ನಾತಕ ಶಿಕ್ಷಣ |

| | | | |
|---|---|---|---|
| | | | ಪದವಿಯ ಕನಿಷ್ಠ ಎರಡು ಸೆಮಿಸ್ಟರ್ ಪರೀಕ್ಷೆಗಳ ಕಾರ್ಯದಿಂದ ಹೊರಗಿಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.<br>ಉಳಿದಂತೆ, ಸ್ನಾತಕ ಶಿಕ್ಷಣ ಪದವಿಯ ಪ್ರಶ್ನೆ ಪತ್ರಿಕೆಯ ಸೋರಿಕೆಯ ಸಂಬಂಧ ವಿಶ್ವವಿದ್ಯಾನಿಲಯವು ಈಗಾಗಲೇ ಕೈಗೊಂಡಿರುವ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು. |
| | | ಸಾಮಾನ್ಯ ಮತ್ತು ಅಭಿವೃದ್ಧಿ ವಿಭಾಗ | |
| 3. | 2022–23:ಸಾ.ಸಿಂ.02: ಸಾ&ಅ ವಿಭಾಗ–01 | ಶ್ರೀ ಮಂಜುನಾಥ ಕೆ.ಜೆ., ಐ.ಟಿ. ಕನ್ಸಲ್ಟೆಂಟ್, ಪರೀಕ್ಷಾ ವಿಭಾಗ ಇವರ ಸೇವೆಯನ್ನು ಮುಂದುವರೆಸುವ ಹಾಗೂ ವೇತನ ಹೆಚ್ಚಳದ ಬಗ್ಗೆ ಮನವಿ ಮಾಡಿರುವ ಕುರಿತು. | ಶ್ರೀ ಮಂಜುನಾಥ ಕೆ.ಜೆ., ಐ.ಟಿ. ಕನ್ಸಲ್ಟೆಂಟ್, ಪರೀಕ್ಷಾ ವಿಭಾಗ ಇವರ ಸೇವೆಯನ್ನು ಮುಂದುವರೆಸುವ ಬಗ್ಗೆ ಹಾಗೂ ವೇತನ ಹೆಚ್ಚಳದ ಕುರಿತು ಚರ್ಚಿಸಿದ ಸಭೆಯು ಈಗಾಗಲೇ ದಿನಾಂಕ:01.12.2021ರ ಆದೇಶದಂತೆ ಸದರಿಯವರ ವೇತನವನ್ನು ರೂ. 35,000–00 ರಿಂದ ರೂ.40,000–00 ಗಳಿಗೆ ಹೆಚ್ಚಿಸಲಾಗಿರುತ್ತದೆ, ಈ ಹಿನ್ನಲೆಯಲ್ಲಿ ಸದರಿಯವರ ವೇತನವನ್ನು ಹೆಚ್ಚಿಸದೇ ಶ್ರೀ ಮಂಜುನಾಥ ಕೆ.ಜೆ., ಐ.ಟಿ. ಕನ್ಸಲ್ಟೆಂಟ್, ಇವರ ಸೇವೆಯನ್ನು ದಿನಾಂಕ:03.02.2023 ರಿಂದ ಪೂರ್ವಾನ್ವಯವಾಗುವಂತೆ ಮುಂದಿನ ಹನ್ನೊಂದು ತಿಂಗಳವರೆಗೆ ಮುಂದುವರೆಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| 4. | 2022–23:ಸಾ.ಸಿಂ.02: ಸಾ&ಅ ವಿಭಾಗ–02 | ಶ್ರೀ ಯೋಗೀಶ್ ಎಂ.ಎಸ್., ಐ.ಟಿ. ಕನ್ಸಲ್ಟೆಂಟ್, ಇವರ ಸೇವೆಯನ್ನು ಮುಂದುವರೆಸುವ ಸಂಬಂಧ ಮನವಿ ಮಾಡಿರುವ ಕುರಿತು. | ಶ್ರೀ ಯೋಗೀಶ್ ಎಂ.ಎಸ್., ಐ.ಟಿ. ಕನ್ಸಲ್ಟೆಂಟ್, ಇವರ ಸೇವೆಯನ್ನು ಮುಂದುವರೆಸುವ ಬಗ್ಗೆ ಹಾಗೂ ವೇತನ ಹೆಚ್ಚಳದ ಕುರಿತು ಚರ್ಚಿಸಿದ ಸಭೆಯು ಸದರಿಯವರ ಸೇವೆಯನ್ನು ದಿನಾಂಕ:22.03.2023 ರಿಂದ ಅನ್ವಯವಾಗುವಂತೆ ಹಾಗೂ ಸದರಿಯವರ ವೇತನವನ್ನು ಹಾಲಿ ಇರುವ ರೂ.35,000–00 ವೇತನಕ್ಕೆ ರೂ. 5,000–00 ಗಳಿಗೆ ಹೆಚ್ಚಿಸಿ, ಮುಂದಿನ ಹನ್ನೊಂದು ತಿಂಗಳವರೆಗೆ ಮುಂದುವರೆಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.<br>ಮುಂದುವರೆದು, ಇನ್ನು ಮುಂದೆ ವಿಶ್ವವಿದ್ಯಾನಿಲಯದ ಐ.ಟಿ. ಕನ್ಸಲ್ಟೆಂಟ್ ಸಿಬ್ಬಂದಿಗಳಿಗೆ ಮಾತ್ರ ಪ್ರತಿ ಎರಡು ವರ್ಷಗಳಿಗೊಮ್ಮೆ ಶೇಕಡ 5% ರಷ್ಟು ವೇತನವನ್ನು ಹೆಚ್ಚಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |

<table>
<tr><td colspan="4">ಸಿಬ್ಬಂದಿ ವಿಭಾಗ</td></tr>
<tr><td>5.</td><td>2022-23:ಸಾ.ಸಿಂ.02:<br>ಸಿಬ್ಬಂದಿ ವಿಭಾಗ-01</td><td>ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಿಸಿ, ಆದೇಶಿಸಿರುವುದನ್ನು ಸ್ಥಿರೀಕರಿಸುವ ಕುರಿತು.</td><td>ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆ ಡಾ. ಮನೋಹರ್ ಶಿಂಧೆ ಇವರನ್ನು ನೇಮಿಸಿ ದಿನಾಂಕ: 10.02.2023ರಂದು ಆದೇಶಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.</td></tr>
<tr><td>6.</td><td>2022-23:ಸಾ.ಸಿಂ.02:<br>ಸಿಬ್ಬಂದಿ ವಿಭಾಗ-02</td><td>ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಸಸ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆ ಶ್ರೀ ಜೆ.ಹೆಚ್. ತಿಮ್ಮಾರೆಡ್ಡಿ, ಆಹ್ವಾನಿತ ಉಪನ್ಯಾಸಕರು, ಇವರಿಗೆ ಸಂಯೋಜಕರ ಹೆಚ್ಚುವರಿ ಜವಾಬ್ದಾರಿಯನ್ನು ನಿರ್ವಹಿಸಲು, ಆದೇಶಿಸಿರುವುದನ್ನು ಸ್ಥಿರೀಕರಿಸುವ ಕುರಿತು.</td><td>ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಸಸ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆ ಶ್ರೀ ಜೆ.ಹೆಚ್. ತಿಮ್ಮಾರೆಡ್ಡಿ, ಆಹ್ವಾನಿತ ಉಪನ್ಯಾಸಕರು, ಇವರಿಗೆ ಸದರಿ ವಿಭಾಗದ ಸಂಯೋಜಕರ ಹೆಚ್ಚುವರಿ ಜವಾಬ್ದಾರಿಯನ್ನು ನಿರ್ವಹಿಸಲು ದಿನಾಂಕ 01.02.2023ರಂದು ಆದೇಶಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.</td></tr>
<tr><td colspan="4">ಶೈಕ್ಷಣಿಕ ವಿಭಾಗ</td></tr>
<tr><td>7.</td><td>2022-23:ಸಾ.ಸಿಂ.02:<br>ಶೈ.ವಿ-01</td><td>ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಇನ್‌ಕ್ಯೂಬೇಷನ್ ಸೆಂಟರ್ ಸ್ಥಾಪಿಸುವ ಕುರಿತು.</td><td>ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಇನ್‌ಕ್ಯೂಬೇಷನ್ ಸೆಂಟರ್ ಸ್ಥಾಪಿಸುವ ವಿಷಯದ ಕುರಿತು ಚರ್ಚಿಸಿದ ಸಭೆಯು ಡೀನರ ಸಮಿತಿಯ ಶಿಫಾರಸ್ಸಿನಂತೆ ವಿಶ್ವವಿದ್ಯಾನಿಲಯದಲ್ಲಿ ಇನ್‌ಕ್ಯೂಬೇಷನ್ ಸೆಂಟರ್ ಸ್ಥಾಪಿಸುವಂತೆ ಹಾಗೂ ಸದರಿ ಸೆಂಟರ್‌ನ್ನು ನಿರ್ವಹಿಸಲು ಇಂಡಸ್ಟ್ರಿ ಹಿನ್ನೆಲೆಯುಳ್ಳ ಒಬ್ಬರನ್ನು ನೇಮಿಸಿ ನಿಯಮಾನುಸಾರ ಕ್ರಮಕೈಗೊಳ್ಳಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.</td></tr>
<tr><td>8.</td><td>2022-23:ಸಾ.ಸಿಂ.02:<br>ಶೈ.ವಿ-02</td><td>ತುಮಕೂರು ವಿಶ್ವವಿದ್ಯಾನಿಲಯದ ಎಂ.ಸಿ.ಎ. ವಿಭಾಗದಲ್ಲಿ ಹೆಚ್ಚುವರಿ ಶುಲ್ಕದೊಂದಿಗೆ 20 ಸೀಟುಗಳನ್ನು ಹೆಚ್ಚಿಸುವ ಕುರಿತು.</td><td>ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ಹೊರ ರಾಜ್ಯದ ವಿದ್ಯಾರ್ಥಿಗಳ ಪ್ರವೇಶಾತಿ ಸಂಬಂಧ Karnataka Examination Authority (KEA) ಯ ಪ್ರವೇಶಾತಿ ನಿಯಮದನ್ವಯ ಎಂ.ಸಿ.ಎ ಕೋರ್ಸಿನ 20 ಹೆಚ್ಚುವರಿ ಸೀಟುಗಳನ್ನು ಪ್ರವೇಶಾತಿ ಮಾಡಿಕೊಳ್ಳಲು ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸುವುದು. ಸರ್ಕಾರದಿಂದ ಅನುಮತಿ ದೊರೆತ ನಂತರ ಮುಂಬರುವ 2023-24ನೇ ಶೈಕ್ಷಣಿಕ ಸಾಲಿನಿಂದ ನಿಯಮಾನುಸಾರ ಕ್ರಮ ಕೈಗೊಳ್ಳಲು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.</td></tr>
</table>

| | | | |
|---|---|---|---|
| | | **ಹೆಚ್ಚುವರಿ ಕಾರ್ಯಸೂಚಿಗಳು** | |
| | | **ಇಂಜನಿಯರಿಂಗ್ ವಿಭಾಗ** | |
| 9. | 2022–23:ಸಾ.ಸಿಂ.02: ಇಂ.ವಿ–01 | ತುಮಕೂರು ವಿಶ್ವವಿದ್ಯಾನಿಲಯದ ತಿಪಟೂರು ಸ್ನಾತಕೋತ್ತರ ಕೇಂದ್ರದಲ್ಲಿ ಶೈಕ್ಷಣಿಕ ಭವನ ನಿರ್ಮಾಣ ಮಾಡುವ ಕಾಮಗಾರಿಯ ಟೆಂಡರ್‌ನ ಕುರಿತು. | ತುಮಕೂರು ವಿಶ್ವವಿದ್ಯಾನಿಲಯದ ತಿಪಟೂರು ಸ್ನಾತಕೋತ್ತರ ಕೇಂದ್ರದಲ್ಲಿ ಶೈಕ್ಷಣಿಕ ಭವನ ನಿರ್ಮಾಣ ಮಾಡುವ ಕಾಮಗಾರಿಯ ಸಂಬಂಧ ನಡೆದ ಟೆಂಡರ್ ಪ್ರಕ್ರಿಯೆಯಲ್ಲಿ L-1 ಗುತ್ತಿಗೆದಾರರಾದ ಶ್ರೀ ಬಸವರಾಜಯ್ಯ ಪಾಲಾಕ್ಷಯ್ಯ (ಅಪೂರ್ವ ಕನ್‌ಸ್ಟ್ರಕ್ಷನ್) ಇವರ ಟೆಂಡರ್ ಮೊತ್ತ ರೂ.3,43,51,570.66 ಮೊತ್ತವನ್ನು ಅಂಗೀಕರಿಸಿ ದಿನಾಂಕ 06.03.2023ರಂದು Letter of Acceptance (LOA) ನೀಡಿ, ಕರಾರು ಒಪ್ಪಂದ ಮತ್ತು ಕಾರ್ಯಾದೇಶವನ್ನು ನೀಡುವಲ್ಲಿ ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ ಸ್ಥಿರೀಕರಿಸಿತು. |
| 10. | 2022–23:ಸಾ.ಸಿಂ.02: ಇಂ.ವಿ–02 | ತುಮಕೂರು ವಿಶ್ವವಿದ್ಯಾನಿಲಯದ ವಿವಿಧ ಕಟ್ಟಡ ಮತ್ತು ಘಟಕ ಕಾಲೇಜುಗಳಿಗೆ ಯು.ಪಿ.ಎಸ್. ವ್ಯವಸ್ಥೆಯನ್ನು ಕಲ್ಪಿಸುವ ಬಗ್ಗೆ. | ತುಮಕೂರು ವಿಶ್ವವಿದ್ಯಾನಿಲಯದ ವಿವಿಧ ಕಟ್ಟಡ ಮತ್ತು ಘಟಕ ಕಾಲೇಜುಗಳಿಗೆ ಯು.ಪಿ.ಎಸ್. ವ್ಯವಸ್ಥೆಯನ್ನು ಕಲ್ಪಿಸುವ ಸಂಬಂಧ ನಡೆದ ಟೆಂಡರ್ ಪ್ರಕ್ರಿಯೆಯಲ್ಲಿ L-1 ಗುತ್ತಿಗೆದಾರರಾದ Ganapati Vishnu Sabhahit (Techser Power Solutions Pvt. Ltd) ಇವರ ಟೆಂಡರ್ ಮೊತ್ತ ರೂ.51,70,802.00 (ಐವತ್ತೊಂದು ಲಕ್ಷದ ಎಪ್ಪತ್ತು ಸಾವಿರದ ಎಂಟುನೂರ ಎರಡು ರೂಪಾಯಿಗಳು ಮಾತ್ರ) ಗಳ ಮೊತ್ತವನ್ನು ಅಂಗೀಕರಿಸಿ ದಿನಾಂಕ:22.02.2023ರಂದು Letter of Acceptance (LOA) ನೀಡಿ, ಕರಾರು ಒಪ್ಪಂದ ಮತ್ತು ಕಾರ್ಯಾದೇಶವನ್ನು ನೀಡುವಲ್ಲಿ ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ ಸ್ಥಿರೀಕರಿಸಿತು. |
| | | **ಸಾಮಾನ್ಯ ಮತ್ತು ಅಭಿವೃದ್ಧಿ ವಿಭಾಗ** | |
| 11. | 2022–23:ಸಾ.ಸಿಂ.02: ಸಾ&ಅ ವಿಭಾಗ–03 | ದಿನಾಂಕ:04.02.2023 ರಂದು ನಡೆದ ಉಪಕುಲಸಚಿವರುಗಳ ಸಭಾ ನಡಾವಳಿ ಕುರಿತು. | ವಿಶ್ವವಿದ್ಯಾನಿಲಯದ ಆಡಳಿತ ವಿಭಾಗಗಳ ಕಾರ್ಯನಿರ್ವಹಣೆಯನ್ನು ಸುಗಮಗೊಳಿಸುವ ಹಿತದೃಷ್ಟಿಯಿಂದ ವಿಭಾಗಗಳ ಕಾರ್ಯನಿರ್ವಹಣೆಯನ್ನು ಪುನರ್ ರಚನೆಯ ಸಂಬಂಧ ದಿನಾಂಕ:04.02.2023ರ ಸಭಾ ನಡಾವಳಿಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |

| | | | |
|---|---|---|---|
| 12. | 2022-23:ಸಾ.ಸಿಂ.02: ಸಾ&ಅ ವಿಭಾಗ-04 | ವಿಶ್ವವಿದ್ಯಾನಿಲಯದ ಸಾರ್ವಜನಿಕ ಸಂಪರ್ಕಾಧಿಕಾರಿಗಳಿಗೆ ತಾಂತ್ರಿಕ ಸಹಾಯಕರನ್ನು ನೇಮಕ ಮಾಡಿರುವ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ಶ್ರೀ ಅಭಿಷೇಕ್ ಎಂ.ವಿ ಇವರನ್ನು ವಿಶ್ವವಿದ್ಯಾನಿಲಯದ ಸಾರ್ವಜನಿಕ ಸಂಪರ್ಕಾಧಿಕಾರಿಗಳ ಕಚೇರಿಗೆ ನೆರವಾಗಲು ಹಾಗೂ ಪತ್ರಿಕೋದ್ಯಮ ವಿಭಾಗದ ತಾಂತ್ರಿಕ ಕೆಲಸ ಕಾರ್ಯಗಳನ್ನು ನಿರ್ವಹಿಸಲು ತಾಂತ್ರಿಕ ಸಹಾಕರನ್ನಾಗಿ ನೇಮಿಸಿ ದಿನಾಂಕ:30.12.2022ರಂದು ವಿಶ್ವವಿದ್ಯಾನಿಲಯವು ಹೊರಡಿಸಿರುವ ಪರಿಷ್ಕೃತ ಆದೇಶದ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ ಸ್ಥಿರೀಕರಿಸಿತು. |
| 13. | 2022-23:ಸಾ.ಸಿಂ.02: ಸಾ&ಅ ವಿಭಾಗ-05 | ತುಮಕೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ಚಿನ್ನದ ಪದಕ ದತ್ತಿನಿಧಿ ಸ್ಥಾಪಿಸುವ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ತುಮಕೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವಕ್ಕೆ ಶ್ರೀ ಡಿ ಸುಬ್ರಮ್ಹಣ್ಯಂ ಶೆಟ್ಟಿ ಸ್ಮರಣಾರ್ಥ ಚಿನ್ನದ ಪದಕ ದತ್ತಿನಿಧಿ ಸ್ಥಾಪಿಸಲು ನಿಯಮಾನುಸಾರ ಕ್ರಮ ಕೈಗೊಳ್ಳಲು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ಅನುಮೋದಿಸಿತು. |
| | | **ಖರೀದಿ ಕೋಶ** | |
| 14. | 2022-23:ಸಾ.ಸಿಂ.02: ಖ.ಕೋ-01 | ತುಮಕೂರು ವಿಶ್ವವಿದ್ಯಾನಿಲಯಕ್ಕೆ Vision Group on Science and Technology (VGST) ಯಿಂದ ಮಂಜೂರಾಗಿರುವ ಸಂಶೋಧನಾ ಯೋಜನೆಯಡಿಯಲ್ಲಿ ಪ್ರಾಯೋಗಿಕ ಉಪಕರಣಗಳನ್ನು ಸರಬರಾಜು ಪಡೆಯುವ ಸಂಬಂಧ ಟೆಂಡರ್ ಆಹ್ವಾನಿಸಿರುವ ಪ್ರಕ್ರಿಯೆಗಳು ಟೆಂಡರ್ ಮೌಲ್ಯಮಾಪನ ಸಮಿತಿಯ ನಡಾವಳಿಗಳು ಹಾಗೂ M/s Aspire INC., Bangalore ಸಂಸ್ಥೆಯವರಿಗೆ ಸರಬರಾಜು ಆದೇಶ ನೀಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯ ಸ್ಥಿರೀಕರಣಕ್ಕೆ ಮತ್ತು ಸದರಿ ಸಂಸ್ಥೆಯವರಿಗೆ ಹುಂಡಿಯ ಮೊತ್ತ ರೂ.8,98,900/- (ರೂಪಾಯಿ ಎಂಟು ಲಕ್ಷ ತೊಂಭತ್ತೆಂಟು ಸಾವಿರದ ಒಂಭೈನೂರು ಮಾತ್ರ) ಗಳನ್ನು ಪಾವತಿಸಲು ಸಿಂಡಿಕೇಟ್ ಸಭೆಯ ಅನುಮೋದನೆ ಕುರಿತು. | ಸದರಿ ವಿಷಯದ ಕುರಿತು ಕೂಲಂಕಷವಾಗಿ ಚರ್ಚಿಸಿದ ಸಭೆಯು ತುಮಕೂರು ವಿಶ್ವವಿದ್ಯಾನಿಲಯಕ್ಕೆ Vision Group on Science and Technology (VGST) ಯಿಂದ ಮಂಜೂರಾಗಿರುವ ಸಂಶೋಧನಾ ಯೋಜನೆಯಡಿಯಲ್ಲಿ ಪ್ರಾಯೋಗಿಕ ಉಪಕರಣಗಳನ್ನು ಸರಬರಾಜು ಪಡೆಯುವ ಸಂಬಂಧ ಟೆಂಡರ್ ಆಹ್ವಾನಿಸಿರುವ ಪ್ರಕ್ರಿಯೆಗಳು ಟೆಂಡರ್ ಮೌಲ್ಯಮಾಪನ ಸಮಿತಿಯ ನಡಾವಳಿಗಳು ಹಾಗೂ M/s Aspire INC., Bangalore ಸಂಸ್ಥೆಯವರಿಗೆ ಸರಬರಾಜು ಆದೇಶ ನೀಡುವಲ್ಲಿ ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.<br>ಮುಂದುವರೆದು, ಸದರಿ ಸಂಸ್ಥೆಯವರು ಸಲ್ಲಿಸಿರುವ ಹುಂಡಿಯ ಮೊತ್ತದ ಪಾವತಿ ಸಂಬಂಧ ನಿಯಮಾನುಸಾರ ಪರಿಶೀಲಿಸಿ ರೂ.8,98,900/- (ರೂಪಾಯಿ ಎಂಟು ಲಕ್ಷ ತೊಂಭತ್ತೆಂಟು ಸಾವಿರದ ಒಂಭೈನೂರು ಮಾತ್ರ) ಗಳನ್ನು ಸದರಿ ಸಂಸ್ಥೆಯವರಿಗೆ ಪಾವತಿಸಲು ಸಿಂಡಿಕೇಟ್ ಸಭೆಯ ತೀರ್ಮಾನಿಸಿತು. |
| | | **ಇಂಜಿನಿಯರಿಂಗ್ ವಿಭಾಗ** | |
| 15. | 2022-23:ಸಾ.ಸಿಂ.02: ಇಂ.ವಿ-03 | ತುಮಕೂರು ವಿಶ್ವವಿದ್ಯಾನಿಲಯದ ನೂತನ ಕ್ಯಾಂಪಸ್‌ನಲ್ಲಿ ನಿರ್ಮಾಣವಾಗುತ್ತಿರುವ ಪ.ಜಾ/ಪ.ಪಂ ವಿದ್ಯಾರ್ಥಿಗಳ ಪರೀಕ್ಷಾ ಪೂರ್ವ ಸಿದ್ಧತಾ/ತರಬೇತಿ ಕೇಂದ್ರ ಕಟ್ಟಡ ನಿರ್ಮಾಣದ ಕುರಿತು. | ಸದರಿ ವಿಷಯದ ಕುರಿತು ಕೂಲಂಕಷವಾಗಿ ಚರ್ಚಿಸಿದ ಸಭೆಯು ತುಮಕೂರು ವಿಶ್ವವಿದ್ಯಾನಿಲಯದ ನೂತನ ಕ್ಯಾಂಪಸ್‌ನಲ್ಲಿ ನಿರ್ಮಾಣವಾಗುತ್ತಿರುವ ಪ.ಜಾ/ಪ.ಪಂ ವಿದ್ಯಾರ್ಥಿಗಳ ಪರೀಕ್ಷಾ ಪೂರ್ವ ಸಿದ್ಧತಾ/ತರಬೇತಿ ಕೇಂದ್ರ ಕಟ್ಟಡ ನಿರ್ಮಾಣದ ಕಾಮಗಾರಿಗೆ |

| | | | |
|---|---|---|---|
| | | | ಸಂಬಂಧಿಸಿದಂತೆ, ದಿನಾಂಕ:28.02.2023 ರಂದು ನಡೆದ ವರ್ಕ್ಸ್ ಕಮಿಟಿ ಸಭೆಯ ಶಿಫಾರಸ್ಸಿನಂತೆ, ತುಮಕೂರು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಿಂದ ಕಾಮಗಾರಿಯ ಉಳಿಕೆ ಮೊತ್ತ ರೂ.130.00 ಲಕ್ಷಗಳಲ್ಲಿ ಶೇಕಡ 50% ರಷ್ಟು ಮೊತ್ತ ರೂ.65.00 ಲಕ್ಷ (ರೂಪಾಯಿ ಅರವತ್ತೈದು ಲಕ್ಷಗಳು ಮಾತ್ರ) ಗಳನ್ನು ಲೋಕೋಪಯೋಗಿ ಇಲಾಖೆಗೆ ಠೇವಣಿ ಮಾಡಲು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ಅನುಮೋದಿಸಿತು. |
| **ಸಾಮಾನ್ಯ ಮತ್ತು ಅಭಿವೃದ್ಧಿ ವಿಭಾಗ** | | | |
| 16. | 2022-23:ಸಾ.ಸಿಂ.02: ಸಾ&ಅ ವಿಭಾಗ-06 | ಕನ್ನಡ ಭಾಷಾಭಿವೃದ್ಧಿ ಯೋಜನೆಯಿಂದ ಪ್ರಕಟಿತಗೊಂಡ ಗ್ರಂಥ / ಪುಸ್ತಕಗಳ ಕುರಿತು. | ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು ಕನ್ನಡ ಭಾಷಾಭಿವೃದ್ಧಿ ಯೋಜನೆಯಿಂದ ಪ್ರಕಟಿತಗೊಂಡ ಗ್ರಂಥ/ ಪುಸ್ತಕಗಳಲ್ಲಿ ಮಾರಾಟಗೊಂಡು ವಿಶ್ವವಿದ್ಯಾನಿಲಯದಲ್ಲಿ ಉಳಿದಿರುವ 31907 ಪುಸ್ತಕಗಳನ್ನು ವಿಶ್ವವಿದ್ಯಾನಿಲಯದ ವ್ಯಾಪ್ತಿಯ ವಿಭಾಗಗಳಿಗೆ, ಗ್ರಂಥಾಲಯಗಳಿಗೆ, ಸಂಯೋಜಿತ ಹಾಗೂ ಸರ್ಕಾರಿ ಕಾಲೇಜುಗಳಿಗೆ ವಿಲೇವಾರಿ ಮಾಡಿ ಸದರಿ ಪುಸ್ತಕಗಳು ಸದುಪಯೋಗವಾಗುವಂತೆ ತೀರ್ಮಾನಿಸಿ, ಸಿಂಡಿಕೇಟ್ ಸಭೆಯು ಅನುಮೋದಿಸಿತು. |

ಮಾನ್ಯ ಕುಲಸಚಿವರು

ಮಾನ್ಯ ಕುಲಪತಿಗಳು